O.S. No.77/14 D.W. 1 Dated :19-07-2022.

ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಪಾಟೀಸವಾಲು -ಶ್ರೀ. ಕೆ.ಕೆ.ಟಿ. ವಾದಿ ಪರ ವಕೀಲರಿಂದ.

ವಾದಿ ನನ್ನ ಚಿಕ್ಕಪ್ಪ. ನಾನು 2 ನೇ ಪ್ರತಿವಾದಿಯ ಮಗಳು. ನನ್ನ ತಾತ ಸಿದ್ದಲಿಂಗೇಗೌಡರಿಗೆ ಇಬ್ಬರು ಪತ್ನಿಯರು , ಅವರೆಂದರೆ , ಮೊದಲನೆ ಹೆಂಡತಿ ಹೆಸರು ಗೊತ್ತಿಲ್ಲ. 2 ನೇ ಹೆಂಡತಿ ಪಾರ್ವತಮ್ಮ . ಮೊದಲನೆ ಹೆಂಡತಿಗೆ ಒಬ್ಬ ಮಗ ಅವರ ಹೆಸರು ನಂಜುಂಡಪ್ಪ , ಇಬ್ಬರು ಹೆಣ್ಣುಮಕ್ಕಳು. ಸಿದ್ದಲಿಂಗೇಗೌಡರ ಮೊದಲನೇ ಹೆಂಡತಿಯ ಎಲ್ಲಾ ಮಕ್ಕಳು ಮರಣ ಹೊಂದಿರುತ್ತಾರೆ. ನಂಜುಂಡಪ್ಪ ಎಂಬುವವರಿಗೆ 3 ಜನ ಗಂಡುಮಕ್ಕಳು , ಒಬ್ಬಳು ಹೆಣ್ಣುಮಗಳು ಇರುತ್ತಾಳೆ. ಅವರೆಂದರೆ , ಮಹಲಿಂಗಪ್ಪ , ಜಗದೀಶ್ , ಲಿಂಗರಾಜು , ಧ್ರಾಕ್ಷಾಯಿಣಿ . ಸಿದ್ದಲಿಂಗೇಗೌಡರ 2 ನೇ ಮಗಳು ಸಿದ್ದಲಿಂಗಮ್ಮ . ಅವರಿಗೆ ಲಲಿತಮ್ಮ , ಅಂಬಿಕಾ , ಈಶ್ವರಪ್ಪ , ಮಲ್ಲೇಶಪ್ಪ , ಧ್ರಾಕ್ಷಾಯಿಣಿ , ವಿಜಯಕುಮಾರ್ ಎಂಬ ಮಕ್ಕಳಿರುತ್ತಾರೆ. ಸಿದ್ದಲಿಂಗೇಗೌಡರ 3 ನೇ ಮಗಳಾದ ಸಿದ್ದಮ್ಮನವರಿಗೆ ಮಕ್ಕಳಿರಲಿಲ್ಲ.

ಸಿದ್ದಲಿಂಗೇಗೌಡರ 2 ನೇ ಹೆಂಡತಿ ಪಾರ್ವತಮ್ಮ ಇವರಿಗೆ 3 ಜನ ಗಂಡುಮಕ್ಕಳು ಒಬ್ಬಳು ಮಗಳು ಇರುತ್ತಾರೆ. ಅವರೆಂದರೆ , ಹಲಗಪ್ಪ (ನನ್ನ ತಂದೆ) , ಷಣ್ಮುಗಪ್ಪ (ವಾದಿ) , ಜಯಪ್ಪ (ಮರಣ ಹೊಂದಿರುತ್ತಾರೆ ಮಕ್ಕಳಿರುವುದಿಲ್ಲ) . ಹೇಮಾವತಿ .

ನಾನು 10 ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಓದಲು ಬರೆಯಲು ಬರುತ್ತದೆ. ವಾದಿಯು ದಾವೆ ಹೂಡಿರುವ ವಿಷಯ ನನಗೆ ತಿಳಿದಿರುತ್ತದೆ. ದಾವಾ ಸ್ವತ್ತಿನಲ್ಲಿ ಭಾಗಾಂಶ ಕೇಳಿ ವಾದಿಯು ದಾವಾ ಹೂಡಿರುತ್ತಾರೆ. ನನಗೆ ಈಗ 53 ವರ್ಷ , ನಾನು 1969 ರಲ್ಲಿ ಜನಿಸಿರುತ್ತೇನೆ. ನನ್ನನ್ನು ಹಾಸನ ತಾಲ್ಲೋಕು , ಉಗನೆ ಗ್ರಾಮದ ಶಿವರುದ್ರಪ್ಪನವರಿಗೆ ಕೊಟ್ಟು ವಿವಾಹ ಮಾಡಿರುತ್ತಾರೆ. ನನ್ನ ವಿವಾಹವಾಗಿ 25 ವರ್ಷಗಳಾಗಿವೆ. ನಾನು ವಿವಾಹವಾದ ನಂತರ ನನ್ನ ತಂದೆಯ ಮನೆಯಲ್ಲಿಯೇ

ವಾಸವಾಗಿರುತ್ತೇನೆ. 1 ನೇ ವಾದಿ ಆರೋಗ್ಯವಾಗಿದ್ದು , ನಡೆದಾಡುತ್ತಾರೆ ಎಂದರೆ ಸಾಕ್ಷಿಯು ನಮ್ಮ ಮನೆಯಲ್ಲಿ ಮತ್ತು ಮನೆಯ ಬಳಿ ಓಡಾಡಲು ಸಾಧ್ಯವಾಗುತ್ತದೆಂದು ನುಡಿಯುತ್ತಾರೆ. ವಾದಿ ಆಲೂರಿಗೆ ಹೋಗಿ ಬಂದು ಮಾಡುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯ ಅನಾರೋಗ್ಯದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. 1 ನೇ ಪ್ರತಿವಾದಿಯು ಆರೋಗ್ಯವಾಗಿದ್ದರೂ ಸಹ ನ್ಯಾಯಾಲಯಕ್ಕೆ ಹಾಜರಾದಲ್ಲಿ ಸತ್ಯಾಂಶ ತಿಳಿಯುತ್ತದೆಂಬ ಕಾರಣಕ್ಕಾಗಿ ಅವರ ಪರವಾಗಿ ನಾನು ಹಾಜರಾಗುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಾತ ಸಿದ್ದಲಿಂಗೇಗೌಡರ ಜೀವಿತಾವಧಿಯಲ್ಲಿ 1979 ರಲ್ಲಿ ಕುಟುಂಬದಲ್ಲಿ ವಿಭಾಗವಾಗಿತ್ತು. ಆ ವೇಳೆಯಲ್ಲಿ ನಾನು 1 ವರ್ಷದ ಮಗುವಾಗಿದ್ದ ಕಾರಣದಿಂದಾಗಿ ಸಿದ್ದಲಿಂಗೇಗೌಡರ ಕುಟುಂಬದಲ್ಲಿ ಸ್ವತ್ತುಗಳಿಗೆ ಸಂಬಂಧಿಸಿದಂತೆ ಆದಂತಹ ಬರವಣಿಗೆಗಳು ಮತ್ತು ವ್ಯವಹಾರಗಳ ಬಗ್ಗೆ ನನಗೆ ತಿಳಿದಿರುವುದಿಲ್ಲ ಎಂದರೆ ಸರಿ . ಕುಟುಂಬದ ಯಜಮಾನರಾಗಿ ನನ್ನ ತಾತ ಸಿದ್ದಲಿಂಗೇಗೌಡರು ನೋಡಿಕೊಳ್ಳುತ್ತಿದ್ದರು. ನಮ್ಮ ತಾತನ ಜೊತೆ ನನ್ನ ತಂದೆಯೂ ಸಹ ಅವರ ವ್ಯವಹಾರದಲ್ಲಿ ಭಾಗಿಯಾಗುತ್ತಿದ್ದರು ಎಂದರೆ ಸರಿ. ನನ್ನ ತಾತ ಸಿದ್ದಲಿಂಗೇಗೌಡರು ಮರಣ ಹೊಂದಿದ ನಂತರ ಕುಟುಂಬದ ಎಲ್ಲಾ ವ್ಯವಹಾರವನ್ನು ಅವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು ಸಿದ್ದಲಿಂಗೇಗೌಡರ ಕುಟುಂಬದಲ್ಲಿ ವಿಭಾಗವಾಗಿತ್ತು ಎಂದು ನುಡಿಯುತ್ತಾರೆ. ನನ್ನ ತಾತ ಮರಣ ಹೊಂದಿದ ನಂತರ ನನ್ನ ತಂದೆಯೇ ಕುಟುಂಬದ ಎಲ್ಲಾ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಕುಟುಂಬದಲ್ಲಿ ಪಿತ್ರಾರ್ಜಿತ ಆಸ್ತಿ ಇದ್ದಲ್ಲಿ ಎಲ್ಲಾ ಮಕ್ಕಳಿಗೂ ಸಮಾನ ಹಕ್ಕು ಇರುತ್ತದೆಂದರೆ ಸಾಕ್ಷಿಯು ಈಗಾಗಲೇ ವಿಭಾಗವಾಗಿರುತ್ತದೆಂದು ನುಡಿಯುತ್ತಾರೆ. ನಮ್ಮ ಕುಟುಂಬದಲ್ಲಿ ಪಾಲುಪಾರೀಕತ್ ಮುಖಾಂತರ ವಿಭಾಗವಾಗಿದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಪಾಲುಪಾರೀಕತ್ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಪಾಲುಪಾರೀಕತ್ತು ಪತ್ರ ಇದ್ದಲ್ಲಿ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೆನು. ನಮ್ಮ ಕುಟುಂಬದಲ್ಲಿ ಯಾವುದೇ ಪಾಲುಪಾರೀಕತ್ ಆಗದ

ಕಾರಣ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ವಾದಿಯು ಯಾವ ಯಾವ ಸರ್ವೆ ನಂಬರ್ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ದಾವೆ ಹೂಡಿದ್ದಾರೆಂದು ನಾನು ನೋಡಿ ತಿಳಿದುಕೊಂಡಿರುತ್ತೇನೆ. ಮತ್ತು ಅವುಗಳ ದಾಖಲೆಗಳನ್ನು ನಾನು ನೋಡಿ ತಿಳಿದುಕೊಂಡಿರುತ್ತೇನೆ. ನನ್ನ ತಂದೆ ಸಲ್ಲಿಸಿರುವ ಲಿಖಿತ ವಾದಪತ್ರವನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ನನ್ನ ಪ್ರಮಾಣ ಪತ್ರಿಕೆಯಲ್ಲಿನ ಅಂಶಗಳು ನನಗೆ ತಿಳಿದಿರುತ್ತವೆ. ಸ.ನಂ.7/3 ರ ಪಹಣಿ ಮತ್ತು ಮ್ಯುಟೇಶನ್ ಅನ್ನು ನಾನು ನೋಡಿ ತಿಳಿದುಕೊಂಡಿರುವುದಿಲ್ಲ. ನಿಪಿ-1 ಮತ್ತು 2 ರಂತೆ ದಾವಾ ಐಟಂ ನಂ-1 ಮತ್ತು 2 ಪೌತಿ ಖಾತೆಯ ಆಧಾರದ ಮೇಲೆ ನನ್ನ ತಂದೆಯ ಹೆಸರಿಗೆ ಖಾತೆ ವರ್ಗಾವಣೆಯಾಗಿರುತ್ತದೆ ಎಂದರೆ ಸರಿ . ಸ.ನಂ.4 ರಲ್ಲಿ 13 ಗುಂಟೆ ಜಮೀನಿರುತ್ತದೆಂದರೆ ಸರಿ . ಸದರಿ ಸ್ವತ್ತು ನನ್ನ ತಂದೆ ಹಾಗೂ 3 ನೇ ಪ್ರತಿವಾದಿಯ ಮಗ ಮಹಾಲಿಂಗಪ್ಪನವರ ಹೆಸರಿನಲ್ಲಿ ನಿಪಿ-3 ರಂತೆ ಜಂಟಿ ಖಾತೆ ಇದೆ ಎಂದರೆ ಸರಿ .  ನಿಪಿ-4 , ಸ.ನಂ.32 ರಲ್ಲಿ 29.12 ಗುಂಟೆ ನನ್ನ ತಾತ ಸಿದ್ದಲಿಂಗೇಗೌಡರ ಹೆಸರಿನಲ್ಲಿರುತ್ತದೆಂದರೆ ಸರಿ . ಹಾಗೆಯೇ ಸ.ನಂ . 32 ರಲ್ಲಿ 1 ಎಕರೆ 19.08 ಗುಂಟೆ ನನ್ನ ತಂದೆಯ ಹೆಸರಿನಲ್ಲಿದೆ ಎಂದರೆ ಸರಿ . ಸ. ನಂ. 32 ರಲ್ಲಿ 1 ಎಕರೆ 19.08 ಗುಂಟೆ ಜಮೀನು ಒಟ್ಟು ಕುಟುಂಬದಲ್ಲಿದ್ದಾಗ ನನ್ನ ತಂದೆಯವರಿಗೆ ಮಂಜೂರಾದ ಸ್ವತ್ತು ಎಂದರೆ ಸರಿ . ಸ.ನಂ. 37 ರಲ್ಲಿ ಒಟ್ಟು 4 ಎಕರೆ 14 ಗುಂಟೆ ಜಮೀನು ಇದ್ದು ನಿಪಿ-5 ರಂತೆ ನನ್ನ ತಂದೆ ಹಲಗಪ್ಪ ಮತ್ತು ಮಹಾಲಿಂಗಪ್ಪ ಬಿನ್ ನಂಜುಂಡಪ್ಪ ರವರ ಜಂಟಿ ಖಾತೆಯಲ್ಲಿದೆ ಎಂದರೆ ಸರಿ . ಸ.ನಂ.109/1 ರಲ್ಲಿ 3 ಎಕರೆ 24 ಗುಂಟೆ ಜಮೀನಿದ್ದು , ನಿಪಿ-6 ರಲ್ಲಿ ಪಿತ್ರಾರ್ಜಿತ ಎಂದು ನಮೂದಾಗಿರುತ್ತದೆ ಎಂದರೆ ಸರಿ .

ಮುಂದುವರಿದ ಪಾಟೀಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಆಲೂರು.